222(2)

Reg No. M 1299 (Founded 191) Daily & Weekly

ಸತ್ಯವಾದಿ
SATYAVADI

(ಆಲಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 28 ಸಂಚಿಕೆ 16½] ಬುಧವಾರ 21—3—45 [5 ಪೈ

ಇದೇ ಕಡೆಯ ಯುದ್ಧವೇ ?

ಲಕ್ಷ್ಮೀಕಾಂತನ ಕೊಲೆ

ಇಂದೂ ನೇರ್ಷ ಪತ್ರಿಕೆಯಿಂದ

.... ಚಿತ್ರ ಬಿಡಿದು ....

೦೨

ಶ್ರೀರಂಗ ದೇವಸ್ಥಾನದ ವಕೀಲರಾದ ಕೃಷ್ಣಯ್ಯಂಗಾರ್ ವಿಷಯವಾಗಿ ಏನನ್ನೂ ವೃತ್ತಪತ್ರಿಕೆಯಲ್ಲಿ ಬರೆಯಬಾರದೆಂದೂ, ಅದಕ್ಕಾಗಿ 500 ರೂ. ಲಂಚ ಕೊಡುವುದಾಗಿಯೂ ಮದರಾಸು ಲಕ್ಷ್ಮೀಕಾಂತನ ಪತ್ರಿಕೆಯಾದ 'ಇಂದೂ ನೇರ್ಷ' ಪತ್ರಿಕೆಗೆ ತಿಳಿಸಿದ್ದರು. ಇಂದೂ ನೇರ್ಷ ಎಡಿಟರು ತಾವು ಈ ಲಂಚವನ್ನು ಸ್ವೀಕರಿಸುವುದಿಲ್ಲವೆಂದೂ, ಕೃಷ್ಣಯ್ಯಂಗಾರ್ಯರು ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳಬೇಕೆಂದೂ, ಇಲ್ಲವಾದರೆ ಇವರು ಇದುವರೆಗೆ ದೇವಸ್ಥಾನದಲ್ಲಿ ನಡೆಸಿದ ಚರಿತ್ರೆಯನ್ನು ಪೂರ್ತಿಯಾಗಿ ಪ್ರಕಟಿಸಲಾಗುವುದೆಂದೂ ತಿಳಿಯಪಡಿಸಿರುತ್ತಾರೆ.

ಚೈನಾಕ್ಕೆ 5 ವರ್ಷ ಯೋಜನೆಯೊಂದು ತಯಾರಿಸಲಾಗಿದೆಯೆಂತೂ. ಕೈಗಾರಿಕೆ ಪ್ರಯಾಣ ಸೌಕರ್ಯದ ಬಗ್ಗೆ 2 ಬಿಲಿಯನ್ ಡಾಲರ್ ಖರ್ಚಿನ ಅಂದಾಜು ಮಾಡಿರುವರೆಂದೂ ವರದಿಯಾಗಿದೆ.

ಗೋರಕಪುರದಲ್ಲಿ ಸಕ್ಕರೆಯನ್ನು ಅಧಿಕ ಬೆಲೆಗೆ ಮಾರಿದನೆಂದು ಒಂದು ಸಕ್ಕರೆ ಕಂಪೆನಿಯ ಮಾಲೀಕನಿಗೆ ರೂ. ೧ ॥ ಲಕ್ಷ ಜುಲ್ಮಾನೆಯಾಯಿತು.



ಐ.ಜೆ. ಹಾಲ್, ಸೆರಾಫ್ ಅಂಗಡಿ
ಡವೇ ಬೀದಿ, ಮೈಸೂರು.

ಯುದ್ಧ ವಾರ್ತೆ

ಸಾನೆ ದ್ವೀಪದಲ್ಲಿ ಅಮೇರಿಕನ್ನರು ಬಂದಿಳಿದರು. ದೂರ ಪ್ರಾಚ್ಯದಲ್ಲಿ 13 ಜಪಾನೀ ಹಡಗುಗಳು ನೀರಿನಪಾಲಾದವು. ಇಪ್ಪೋಜಿಮಾದಲ್ಲಿ ಕದನ ನಿಂತಿದೆ. ಮಾಂಡಡಯಲ್ಲಿ ಜಪಾನರು ಪ್ರತಿಭಟಿಸಿ ನಾಮುತ್ತಿರುವರು. ಸ್ಟೆಟ್ ಬಲವಾದ ಕದನವಾಗುತ್ತಿದೆ. ಸಾರ್ ಬಳಿ ಜರ್ಮನರ ಸ್ಥಿತಿ ಚಿಂತಾಜನಕವಾಗಿದೆ.

ತುರ್ಕಿ ಮತ್ತು ಈಜಿಪ್ಟ್ ಜಪಾನಿನ ಮೇಲೆ ಯುದ್ಧ ಹೂಡಿದ್ದರಿಂದ ಜಪಾನೀಯರು ತಮ್ಮ ಮುಸ್ಲಿಂ ಜನಾಂಗದ ಮೇಲೆ ಈಗ ಹೆಚ್ಚು ಪ್ರೀತಿ ತೋರಿಸುತ್ತಿರುವರು.

೦ ೦

ಲಕ್ಷ್ಮೀಕಾಂತಂ ಕೊಲೆ ಮೊಖದ್ದಮೆಯ ಸಂಬಂಧದ ವಿಚಾರಣೆಯು ಏಪ್ರಿಲ್ 2 ರಿಂದ ಮದ್ರಾಸ್ ಹೈಕೋರ್ಟ್‌ನಲ್ಲಿ ನಡೆಯುವುದು.

೦ ೦

ಮುಂದಿನ ತಿಂಗಳು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನಡೆಯುವ ಸಮ್ಮೇಳನದಲ್ಲಿ 'ತಮ್ಮ ನೀತಿಯನ್ನು ಸ್ಪಷ್ಟಪಡಿಸಲು' ಅಮೇರಿಕ ಸರಕಾರವು ಹೆಚ್ಚು ಮುಂದಿ ವೃತ್ತಪತ್ರಿಕಾಕಾರರನ್ನು ಕರೆಸುವರಾರಂತೆ.

೦ ೦

ಭಾರತೀಯರು ಅಮೇರಿಕಾದಲ್ಲಿ ನೆಲೆಸುವ ಹಕ್ಕಿನ ವಿಷಯದಲ್ಲಿ ಭಾರತೀಯ ರಕ್ಷಣಾ ಸಂಘ, ಸ್ಯೂ ಇಂಡಿಯಾ ಎಡಿಟರಾದ ಮಿ ॥ ಸುಬಾರಕ್ ಅಲಿ ಖಾನರು ಹೌಸ್ ಕಮಿಟಿ ಮುಂದೆ ತಮ್ಮ ಹೇಳಿಕೆ ಕೊಟ್ಟರು.

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ದಕ್ಷಿಣ ಆಫ್ರಿಕಾ ಪ್ರತಿನಿಧಿಯಾಗಿ ಹೋಗುವ ಜ ॥ ಸ್ಮಟ್ಸರವರು 'ಇದೇ ಕಡೆಯ ಯುದ್ಧವಾಗಬಹುದು' ಎಂದು ಅಲ್ಲಿಯ ಸಭೆಯಲ್ಲಿ ತಿಳಿಸಿದರು.

೦ ೦

ಹಿಟ್ಲರು ಯುವಕ ಮುಖಂಡರನ್ನು ಬಾನಾಡಿಕೊಂಡು, ನಮಗೆ ಇಂಥಾ ಕ್ಲಿಷ್ಟ ಕಾಲವಾದರೂ ನಾವು ಬಹು ಶೀಲರಾಗುತ್ತೇವೆ, ಎಂದು ಹೇಳಿದ್ದುವು ದಾಗಿ ಜರ್ಮನ್ ರೇಡಿಯೋ ತಿಳಿಸಿದೆ' ಈ ಮುಖಂಡರ ಪೈಕಿ 12 ವರ್ಷದ ಹುಡುಗನೊಬ್ಬನಿದ್ದನೆಂದೂ, ಅವನು ಯುದ್ಧದಲ್ಲಿ ಪ್ರಸಿದ್ಧಿಯಾಗಿರುವನೆಂದೂ ಹೇಳಲಾಗಿದೆ.

೦ ೦

ಮುಂಬೈನಲ್ಲಿ ಇನ್ನು ಮುಂದೆ ಬಟ್ಟೆ ರೇಷನಿಂಗ 1 ಪ್ರತಿ 6 ತಿಂಗಳಿಗೆ ಗಂಡಸಿಗೆ ೧ ಜೊತೆ ಪಂಚೆ, ಹೆಂಗಸಿಗೆ ೧ ಜೊತೆ ಸೀರೆ.

೦ ೦

ಜರ್ಮನ್ ಸೇನೆಗಳ ಮುಂದಾಳುಗಳು ಯಾರೂ ಹೇಡಿಗಳಾಗಿ ಓಡಿಹೋಗದೆ ಯುದ್ಧ ಮಾಡಬೇಕು, ಇಲ್ಲವಾದರೆ ಅವರನ್ನೆಲ್ಲಾ ಎರಡು ಗಂಟೆಯೊಳಗಾಗಿ ಗಲ್ಲಿಗೆ ಏರಿಸುವುದಾಗಿ ಹಿಟ್ಲರ್ ಆಜ್ಞೆ ಮಾಡಿದ್ದಾನೆ.

೦ ೦

ಬೆಂಗಳೂರು ಹೋಟಲುಗಳಿಗೆ ಹಾಲಿನ ಪೂರೈಸಪರಾಜು ಮಾಡುವ ಯೋಜನೆ ಇದೆ.

೦ ೦

ಪ್ರ. ಪ್ರ. ಸಭೆಯ ಬಜೆಟ್ ಅಧಿವೇಶನವು ಬೆಂಗಳೂರಿನಲ್ಲಿ ಜೂನ್ 1 ರಿಂದ ಪ್ರಾರಂಭವಾಗುವುದು.

ವಿವಿಧ ವಿಷಯ

ಹಿಂದೂ ಧರ್ಮಶಾಸ್ತ್ರ ತಿದ್ದುಪಡಿ ಮಾಡಬಾರದೆಂದು ಅಯ್ಯೂರಿನಲ್ಲಿ ೧೦ ಸಾವಿರ ಸ್ತ್ರೀಯರು ಮತ್ತೆಯವರು ಸೇರಿರುವ ಒಂದು ಸಭೆಯು ನುಂಬೆ ಸಿಂತು ಗಲಭೆ ಮಾಡುತ್ತಿರುವರು.

ರಷ್ಯಾ ಸೆಂಗಡ ಸಂಧಾನ ನಡೆಸಲು ಜರ್ಮನರು ಮಾರ್ಷಲ್ ಶಿಟ್‌ವರ್‌ರವರನ್ನು ಕಳಿಸಿಸುವರಾಗಿರುವರು.

ಹಿಂದು ಶಾಸ್ತ್ರ ತಿದ್ದುಪಡಿಯಾಗಬಾರದೆಂದು ವೀರಶೈವರವರು ಅಲ್ಲಲ್ಲಿ ಕೋಲಾಹಲದಲ್ಲಿ ೬೦ ದಿವಸ ಉಪವಾಸ ಮಾಡುತ್ತಿರುವರು.

ಬಾಂಬಯಿನಲ್ಲಿ ಅನೇಕ ಮನೆಗಳನ್ನು ಮಿಲಟರಿಯವರ ಉಪಯೋಗಕ್ಕೆ ತೆಗೆದುಕೊಂಡಿದ್ದರಿಂದ ಅನೇಕರಿಗೆ ಮನೆ ಇಲ್ಲದೆ ವಿದ್ಯಾರ್ಥಿಗಳಿಗೆ ಸ್ಥಳವಿಲ್ಲದೆ ತೊಂದರೆಯಾಗಿ ಇಂದ್ರ ಅಸೆಂಬ್ಲಿಯಲ್ಲಿ ಚರ್ಚೆಯಾಗುತ್ತಿದೆ.

ಮಂಗಳೂರಿನಲ್ಲಿ ಕಾಡೆಗಳಿಗೆ ಕೊರತೆಯಾಗಿದೆಯೆಂದು ನಮ್ಮ ಪಾತ್ರೀದಾರರು ಬರೆಯುತ್ತಾರೆ.

ಹೊಟ್ಟೆಗಿಲ್ಲದೆ ಬಂಗಾಳಾದಲ್ಲಿ ಮೃತಪಟ್ಟವರ ಸಂಖ್ಯೆ 3½ ಲಕ್ಷಕ್ಕೆ ಏರಿತೆಂದು ಹೇಳಲಾಗಿದೆ.

ರಷ್ಯಾ-ಜಪಾನ್ ಸ್ನೇಹ ಒಪ್ಪಂದ ಇದೇ 21-4-45 ಕ್ಕೆ ಮುಗಿಯುವುದು. ರಷ್ಯನರು ಹೊಸ ಕರಾರು ಮಾಡಿಕೊಳ್ಳುವುದಿಲ್ಲವೆಂದೂ, ಇದಕ್ಕಾಗಿ ಯೂರೋಪಿನಲ್ಲಿಯೂ 9 ರಾಯಭಾರಿಗಳು ಜಪಾನಿಗೆ ಹೋಗಿರುವರೆಂದೂ ತಿಳಿಯಬಂದಿದೆ.

ತಾನು ವಾಸ ಮಾಡುತ್ತಿದ್ದ ಮನೆಯನ್ನು ಬಿಡಬೇಕೆಂದು ಆಜ್ಞೆ ಮಾಡಿದರೆಂದು ಅಲಹಾಬಾದ್ ಮಾಜಿ ಅಡ್ವೋಕೇಟ್ ಜನರಲ್ ಶ್ರೀ ದಕ್ಷರು ಸರಕಾರದ ಮೇಲೂ ಹೈಕೋರ್ಟ್ ಜಡ್ಜರ ಮೇಲೂ ದಾವಾ ಹೂಡಿರುವರು.

ಯುದ್ಧಕಾರ್ಯಕ್ಕಾಗಿ ಜಪಾನ್ ಪಾಠಶಾಲೆಗಳು ಬಂದಾಯಿತು. ವಿದ್ಯಾರ್ಥಿಗಳು ಓದುವ ಬದಲು ಮದ್ದುಗುಂಡು ತಯಾರು ಮಾಡಬೇಕಾಯಿತು.

ಜಪಾನಿನಲ್ಲಿ ಇನ್ನು ಮುಂದೆ ಐದು ವೃತ್ತಪತ್ರಿಕೆಗಳೂ ಒಂದೇ ಕಡೆ ಮುದ್ರಿತವಾಗುವುದು.

ವಾರ್ತಾತರಂಗ

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಕವಿ.ಟಿ ಮಾಟಿಂಗು ಬೆಂಗಳೂರಿನಲ್ಲಿ 26 ನೇ ತಾರೀಖಿನಲ್ಲಿ ನಡೆಯುವುದು.

ರಾಜಧಾನಿಯ ಪತ್ರಿಕೋದ್ಯೋಗಿ ಸಂಘದವರು ಕಳೆದ ಶನಿವಾರ, ಮೈಸೂರಿನವರಾದ ಮತ್ತು ನಾಗಪುರದ 'ಹಿತವಾದ' ಆಂಗ್ಲ ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಎಸ್. ಭಾರದ್ವಾಜರವರಿಗೆ ಸತ್ಕಾರ ನಡೆಸಿದರು. ಶ್ರೀ ಭಾರದ್ವಾಜರು ಮೂದರಿ ಸಂಸ್ಥಾನವಾದ ಮೈಸೂರಿನಲ್ಲಿ ಪತ್ರಿಕೆಗಳಿಗೆ ವಿಶೇಷ ಗೌರವ ಸ್ಥಾನವಿಲ್ಲವೆಂದು ವಿಷಾದಿಸಿದರು.

ನಾಜನಗೂಡಿನಲ್ಲಿ 30 ವರ್ಷಗಳಿಂದಲೂ ಸಂಸ್ಕೃತ ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ನಿವೃತ್ತರಾಗಿದ್ದ ವೇ॥ ಬ್ರಹ್ಮಂ॥ ನಾರಾಯಣ ಶಾಸ್ತ್ರಿಗಳು ಕಳೆದ ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ರಾಜಧಾನಿಯ ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ಎಸ್. ಶಾಸ್ತ್ರಿಗಳ ತಂದೆಯವರು.

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ತಮ್ಮ ಬಿಡುಗಡೆ ವಿಷಯ ತಿಳಿದಾಗ್ಯೂ, ತಾವೊಬ್ಬರೇ ಬಿಡುಗಡೆ ಆಗುವುದನ್ನು ಒಪ್ಪುವುದಿಲ್ಲವೆಂದು ಹೇಳಿದ್ದರಿಂದ, ಅವರ ಸಂಗಡ ಇದ್ದ ಇತರ ರಾಜಕೀಯ ಬಂಧಿತರೂ ಬಿಡುಗಡೆ ಹೊಂದಿದ್ದಾರೆ.

ಬ್ರಿಟನ್ನಿನಲ್ಲಿ ಪ್ರೈದಿಯಾಗಿರುವ ಜರ್ಮನ್ ಹೆಸ್‌ರವರಿಗೆ ಬುದ್ಧಿಭ್ರಮಣೆಯಾಗಿದೆ.

ಮುಂದೆ ಎಲ್ಲಿ ತಮ್ಮ ವ್ಯಾಪಾರಕ್ಕೆ ಅನೇರಿಕಾದವರು ಕೈ ಹಚ್ಚುವರೋ ಎಂದು ಭಾರತದಲ್ಲಿ ಬ್ರಿಟಿಷರು ಈಗಿನಿಂದಲು ತಕ್ಕ ಸನ್ನಾಹ ಮಾಡಲು ಪ್ರಾರಂಭಿಸಿರುವರು.

ಮುಂಬಯಿನಲ್ಲಿ ಟ್ರಾಂವೇ ಕಂಪನಿಯ ಕೆಲಸಗಾರರು ಮುಷ್ಕರವಾಗಿ ಟ್ರಾಂ ಮತ್ತು ಬಸ್ಸುಗಳ ಓಡಾಟ ಪೂರ್ತಿಯಾಗಿ ನಿಂತಿದೆ.

ಆಗಖಾರವರು ವಜ್ರಜುಬ್ಲಿ ಉತ್ಸವವನ್ನು ಸ್ವಿಟ್ಜರ್‌ಲಾಂಡಿನಲ್ಲಿ ಮುಗಿಸಿಕೊಂಡು ಭಾರತಕ್ಕೆ ೧೯೪೬ ಕ್ಕೆ ಬರುವುದಾಗಿರುವರು.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

At Ranjit Pagli Duniya

ರಣಜಿತ್ ಟಾಕೀಸಿನಲ್ಲಿ

ಪಗಲಿದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ನೋತಿಲಾಲ್ ಷೇಕ್‌ಮುಕ್ತಾರ್

ಪಾತ್ರವಹಿಸಿರುವರು

ಪ್ರತಿ ದಿನ 3 ಆಟಗಳು

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ ಅಮೋಘ 2 ನೇ ವಾರ

AT OPERA — Abroo

ಅಪೆರಾ ಟಾಕೀಸ್

20-3-45 ರಿಂದ

ಶೋಭೀಲಾಲ್, ನೂರ್‌ಜಹಾ ಪಾತ್ರವಹಿಸಿರುವ

ದೋಸ್ತ್ (ಹಿಂದಿ)

DOST

ಪ್ರತಿ ದಿನ 3 ಆಟಗಳು

Good Coffee

Sastry's Coffee Rooms
Chamarajapuram, Mysore

For Good Printing—
L. N. Press
Srirampet MYSORE

ಗ್ಲೂ ಕೋನೇಟ್ - ಡಿ.

.... ಬಿಲ್ಲೆಗಳು ....

ಕ್ಯಾಲ್ಸಿಯಂ ಗ್ಲೂಕೋನೇಟ್
ಮತ್ತು ವಿಟಮಿ ಡಿ. ಮಿಶ್ರಿತವಾಗಿದ್ದು
ಚಾಕೊಲೆಟ್‌ನಂತೆ ರುಚಿಕರವಾಗಿದೆ.

ಕ್ಯಾಲ್ಸಿಯಂ ಅಭಾವದ ಎಲ್ಲಾ ಪರಿಸ್ಥಿತಿಗೂ
ಬಸಿರುತನ ಮತ್ತು ಮಕ್ಕಳು ಸ್ತನಪಾನಮಾಡುವ ಅವಧಿಗೂ,
ಮಕ್ಕಳ ಎಲುಬುಗಳು ಸದೃಢವಾಗಲೂ ಇದನ್ನು
ಶಿಫಾರಸು ಮಾಡಲಾಗಿದೆ.

ಐ. ಟಿ. ಎಲ್. ತಯಾರಿಕೆ

ಗೌರ್ನಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್
ಲೆಬೊರೇಟರಿ

ಪೋ. ರ. ಮಲ್ಲೇಶ್ವರಂ — ಬೆಂಗಳೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ತ್ರಿಮೂರ್ತಿಗಳ ಸಮ್ಮೇಳನ

ರಷ್ಯಾದ ಕ್ರಿಮಿಯಾದಲ್ಲಿರುವ ಯಾಲ್ಟದಲ್ಲಿ ತ್ರಿಮೂರ್ತಿಗಳ ಸಮ್ಮೇಳನವು ಈಗ 8 ದಿವಸಗಳಿಂದ ನಡೆಯುತಿಂದು ಹೇಳಲಾಗಿದೆ. ಅಲ್ಲಿ ನಡೆದ ಮುಖ್ಯ ತೀರ್ಮಾನವು ಈ ರೀತಿ ಇದೆ—

ಜರ್ಮನಿಯ ಮಿಲಿಟರಿಯನ್ನು ನಿರ್ಮೂಲ ಮಾಡುವುದು, ಜರ್ಮನ್ ಕೈಗಾರಿಕೆಯನ್ನು ತಮ್ಮ ಹತೋಟಿಯಲ್ಲಿಟ್ಟುಕ್ಕೊಳುತ್ತುದು, ಯುದ್ಧಾಪರಾಧಿಗಳನ್ನು ವಿಚಾರಣೆಗೆ ಗುರಿಪಡಿಸುವುದು, ಫ್ರಾನ್ಸನ್ನು ತನ್ನ ಸಂಗಡ ಸೇರಿಸಿಕೊಂಡು ಸಹಾಯಮಾಡುವುದು, ನಾಜಿ ಸಂಸ್ಥೆ ಮತ್ತು ನಾಜೀಕಾರ್ಯಕ್ರಮಗಳೆಲ್ಲವನ್ನೂ ನಿರ್ಮೂಲ ಮಾಡುವುದು. ಮುಂದಿನ ಸಮ್ಮೇಳನ 25-4-45 ರಲ್ಲಿ ಸ್ಯಾನ್ ಫ್ರಾನ್ಸಿಸ್ಕೊ (ಅಮೇರಿಕಾ) ದಲ್ಲಿ ಸೇರುವುದು. ಜರ್ಮನಿಯನ್ನು ಮೂರು ದಿಕ್ಕುಗಳಲ್ಲಿ ತ್ರಿಮೂರ್ತಿಗಳು ಹಂಚಿಕೊಳ್ಳುವುದು, ಫ್ರಾನ್ಸಿಗೆ ಸಹಾ ಭಾಗ ಕೊಡುವುದು, ನಾಜಿಗಳಿಂದ ಆದ ನಷ್ಟದ ಪಟ್ಟಿ ತಯಾರಾಗ್ಮಾಡುವುದು, ಈ ಸಮ್ಮೇಳನದ ಕೇಂದ್ರ ಕಛೇರಿ ವಾಷಿಂಗ್ಟನ್ ನಲ್ಲಿರುತ್ತದ್ದು.

ಇದೇ ಅಟ್ಲಾಂಟಿಕ್ ಛಾರ್ಟರ್ ಮೂಲಕ ಪೋಲಿಷ್ ಸರಕಾರದ ಚರ್ಚೆ ತೀರ್ಮಾನವಾಯಿತು. ಯುಗೊಸ್ಲೋವಿಯಾ ವಿಷಯ ರಾಜೀಮಾಡಲಾಯಿತು. ಅಗಾಗ್ಗೆ ತಮ್ಮ ಹೊರದೇಶದ ಸೆಕ್ರಿಟರಿಗಳು ಒಟ್ಟಿಗೆ ಸೇರಿ ಮಾತುಕತೆ ನಡೆಸುವುದು.

ಈ ರೀತಿ ತೀರ್ಮಾನಿಸಿ ಪತ್ರಕ್ಕೆ ತ್ರಿಮೂರ್ತಿಗಳು ರುಜುಮಾಡಿದರು.

ಇತ್ತ ಕೇಳಿ !

ಮುಂದೆ ರಷ್ಯಾ ಪಶ್ಚಾ ಮತ್ತು ಯೂರೋಪಿನಲ್ಲಿ ತಮ್ಮ ಯೋಜನೆಯನ್ನು ರಹಸ್ಯವಾಗಿ ಮಾಡಿದರು. ನಾವು ಯುದ್ಧ ಹೂಡಿದ್ದು ಪೋಲೆಂಡಿಗೆ ಸಹಾಯ ಮಾಡಲು. ಅದು ಹೋಗಿ ಹಿಟ್ಲರನ ಹಿಡಿತಕ್ಕಿಂತ ಹೆಚ್ಚಾಗಿಯೇ ರಷ್ಯನ್ನರು ಭೂಮಿಯನ್ನು ಆಕ್ರಮಿಸಿರುವರು. ಯುದ್ಧಾನಂತರ ಟ್ರುಟ್ಸ್ ಸ್ಥಾನ ಎರಡನೇದಕ್ಕೆ ಇಳಿಯುವುದು. ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಾದರಿ ತೋರಿಸಬೇಕು. ಬ್ರಿಟಿಷ್ ಶಸ್ತ್ರಾಸ್ತ್ರಗಳನ್ನು ಬಿಸಾಡಬೇಕು. ಹಣವನ್ನು ಸಿವಿಲ್ ಜನರಿಗೆ ಉಪಯೋಗ ಮಾಡಬೇಕು. ಹೀಗೆಂದು ಶ್ರೀಮಂತ ಸರ್ವಾಧಿಕಾರಿ ತತ್ವದ ಅನುಯಾಯಿ ಡ್ಯೂಕ್ ಆಫ್ ಪೆಡ್‌ಫರ್ಡ್‌ರವರು ಹೇಳಿರುವರು.

ವಿವಿಧ ವಿಷಯ

ಸೋವಿಯತ್ ತಾಟಸ್ಥ್ಯವಾಗಿರುವ ರಾಜ್ಯಗಳೆಲ್ಲಾ ಕ್ರಿಸ್ತಪ್ರದಲ್ಲಿ ಜರ್ಮನಿಯುದ್ಧ ಸಾರುವುವೆಂದು ಹೇಳಲಾಗಿದೆ.

ಂ ಂ

ಪ್ಯಾರಿಸ್ಸಿನವರು ಬಿಕ್ಕನ್ನು ತಿನ್ನುತ್ತಿದ್ದಾರೆ. ಈಗಾಗಲೇ ಅಲ್ಲಿಯ 30 ಸಾವಿರ ಬೆಕ್ಕುಗಳು ಮಾಯವಾಗಿವೆಯಂತೆ. ಒಂದು ಬಿಕ್ಕಿಗೆ 30 ಷಿಲಿಂಗು; ಮಾಂಸಕ್ಕೆ 15 ಷಿಲಿಂಗು, ತೊಗಲಿಗೆ 15 ಷಿಲಿಂಗು.

ಂ ಂ

ಯುದ್ಧಾರಂಭವಾದಾಗಿನಿಂದ ಮಿ॥ ಚರ್ಚಿಲ್ಲರು ಬ್ರಿಟಿಷ್ರೊಂಗೆ 150000 ಮೈಲಿ ಸಂಚಾರ ಮಾಡಿರುತ್ತಾರೆ.

ಂ ಂ

ಬ್ರಸ್ಟಲ್ಲಿನಲ್ಲಿ ಒಂದು ಬ್ಲಾಕ್ ಕ್ಲಬ್ ಇದೆ, ಇದರ ಸದಸ್ಯರು 12 ಮಂದಿ ಮಾತ್ರ. ಒಬ್ಬ ಸದಸ್ಯನು ಸತ್ತರೆ ಮತ್ತೊಬ್ಬರು ಸೇರಲು ನಿನುಕಾಲವಾಗುವುದು,

ಂ ಂ

ಮುಂದಿನ ಏಪ್ರಿಲ್‌ನಲ್ಲಿ ರಷ್ಯಾ ಜಪಾನ್ ಒಪ್ಪಂದದವಾಯಿದೆ ಮುಗಿಯುವುದು. ಆಗ ರಷ್ಯಾ ಜಪಾನ್ ಮೇಲೆ ಯುದ್ಧ ಹೂಡುವರೆಂದು ಹೇಳಲಾಗಿದೆ.

ಂ ಂ

ಚಿಲ್ಲಿಯು ಜಪಾನಿನ ಮೇಲೆ ಯುದ್ಧ ಸಾರಿದೆ.

ಂ ಂ

ಅಮೇರಿಕಾದಿಂದ ಬಹು ಮಂದಿ ಗಂಡಸರು ಪರದೇಶಗಳಲ್ಲಿ ಸೇನೆಗೆ ಸೇರಿ ಯುದ್ಧಮಾಡುತ್ತಿರುವರು ಸ್ವದೇಶವನ್ನು ನೋಡಿ ಎಷ್ಟೋ ಕಾಲವಾಯಿತು. ಆದರೂ ಯುದ್ಧದಲ್ಲಿ ಮಡಿದವರಿಗಿಂತ ಜನನ 1 ಕ್ಕೆ ರಷ್ಟಾಗಿದೆ. ಯುದ್ಧ ಕಾಲ !

ಂ ಂ

ಇಂಗ್ಲೆಂಡಿನಲ್ಲಿ ಯುದ್ಧಕ್ಕೆ ಮುನ್ನ ಇದ್ದದಕ್ಕೂ ಈಗಿರುವುದಕ್ಕೂ ಕೂಲಿ ಶೇಕಡ 45 ರಷ್ಟು ಹೆಚ್ಚಿದೆ. ಆಹಾರದ ಬೆಲೆ 33 ರಷ್ಟು ಹೆಚ್ಚಿದೆ. ಭಾರತದಲ್ಲಿ ಕೂಲಿ ಸಂಬಳ 50 ರಷ್ಟು, ಆಹಾರಬೆಲೆ 250 ರಷ್ಟು ಹೆಚ್ಚಿದೆ.

ವಾರ್ತಾತರಂಗ

ಮುಂಬೈನಲ್ಲಿ ಒಂದು ಸೀಸೆ ವಿಸ್ಕಿಯನ್ನು ರೂ. 25 ಕ್ಕೆ ಕೊಂಡು ಚಿಲ್ಲರೆಯಾಗಿ ಮಾರಿದರೆ ರೂ. 35 ಫಾಯಿದೆ ಬರುವುದು. ಇದಕ್ಕೆ ಕಂಟ್ರೋಲ್ ಇಲ್ಲವೋ?

ತ್ರಿಮೂರ್ತಿಗಳು ಕ್ರಿಮಿಯಾದಲ್ಲಿ ಮಾಡಿದ ತೀರ್ಮಾನ ಸಮರ್ಪಕವಾಗಿಲ್ಲ. ಪೋಲೆಂಡ್ ತೀರ್ಮಾನ ಅಸಮಾಧಾನಕರವಾಗಿದೆ. ಇಟಲಿಯ ಕ್ಯಾಥಲಿಕ್ ಮತ ವಿಷಯದಲ್ಲಿ ಅಟ್ಲಾಂಟಿಕ್ ಛಾರ್ಟರ್ ಉದ್ದೇಶದಂತೆ ಸಫಲವಾಗಲಿಲ್ಲ, ಎಂದು ಪೋಪರು ಒಂದು ಹೇಳಿಕೆಕೊಟ್ಟಿರು.

ಲಕ್ಷ್ಮೀಕಾಂತಂ ಮೊಖದ್ದಮೆ ಸಂಬಂಧದಲ್ಲಿ ಇವರಿಗೆ ಹಿಂದೆ ಕೊಟ್ಟಿದ್ದ ಜಾಮೀನು ಅರ್ಜಿಯು ವಜಾಮಾಡಲ್ಪಟ್ಟಿದೆ. ಭಾಗವತರು ಮ್ಯಾಜಿಸ್ಟ್ರೇಟ್ ಕೋರ್ಟಿಗೆ ತಾವೇ ಶರಣಾಗತರಾದರು. ಕೃಷ್ಣರವರು ದಸ್ತಗಿರಿ ಮಾಡಲ್ಪಟ್ಟರು. 19 ನೇ ತಾರೀಖಿನವರೆಗೆ ರಿಮ್ಯಾಂಡು ಮಾಡಲ್ಪಟ್ಟರು.

ಜರ್ಮನಿಯಲ್ಲಿ ಡಾ ॥ ಗೋಬೆಲ್ಸ್ ಹೆಸರುವಾಸಿಯಾದದ್ದು 'ಡೆರ್ ಆಂಗ್ರಿಫ್' ಎಂಬ ವೃತ್ತಪತ್ರಿಕೆಯಿಂದ. ಇದರ ಸಂಪಾದಕೀಯ ಲೇಖನವನ್ನೆಲ್ಲಾ ಗೋಬಲ್ಸನೇ ಬರೆಯುತ್ತಿದ್ದನು. ಈ ವೃತ್ತಪತ್ರಿಕೆಯು ನಾಳೆಯಿಂದ ನಿಲ್ಲಿಸಲ್ಪಡುವುದು.

ಡಾ ॥ ರಾಂಭಾವ್ ಭೋಗೆಯವರ ಪತ್ನೀಹಟ್ಟಿದವರಿಗೆ ರೂ. 4000 ಕೊಡುವುದಾಗಿ ಸರ್ಕಾರದವರು ಪ್ರಕಟಿಸಿದ್ದರು. ಗಾಂಧೀಜಿಯವರ ಅಪ್ಪಣೆ ವೇರೆ ತಾವು ಪೋಲೀಸರ ಅಧೀನರಾದ್ದರಿಂದ ಆ ರೂ 4000 ನ್ನು ಗಾಂಧೀಜಿಯವರಿಗೆ ಕೊಡಬೇಕೆಂದು ಡಾಕ್ಟರರು ಬರೆದಿದ್ದಾರೆ.

ವಾಷಿಂಗ್ಟನ್ನಿನಲ್ಲಿ ಶ್ವೇತ ಆಲಮನೆಯ ಬಾಗಿಲಲ್ಲಿ ಬಿಸಲು ಕಾಲದಲ್ಲಿ ನಿಂತುನೋಡಿದರೆ ಒಬ್ಬ ಹೆಂಗಸು ಒಂದು ಕಂಭಕ್ಕೆ ಒರಗಿಕೊಂಡು ನಿಂತಹಾಗೆ ಕಾಣಬರುವುದು. ಸ್ವಲ್ಪ ಕಾಲ ದೃಷ್ಟಿಸಿ ನೋಡಿದರೆ ಅದು ಇಂಗ್ಲೆಂಡ್ ರಾಣಿ ರಾಣಿ ವಿಕ್ಟೋರಿಯಾಳಂತೆ ಕಾಣುವುದು. ರಾಣಿ ವಿಕ್ಟೋರಿಯಾ ಅಮೇರಿಕಾ ದೇಶದಲ್ಲಿ ಕಾಲಿಟ್ಟಿರಲಿಲ್ಲ.

ಮುಂಬಯಿನಲ್ಲಿ 1930 ರಿಂದ ಈಚೆಗೆ ಜನಸಂಖ್ಯೆ ಶೇಕಡಾ 75 ರಂತೆ ಹೆಚ್ಚಿದೆ. 1941 ರಲ್ಲಿ ಹೊಸ ಕಟ್ಟಡವ್ಯಾವುದೂ ಕಟ್ಟಲ್ಲ. ಹಾಲಿ ಇರುವ ಅನೇಕ ಕಟ್ಟಡಗಳು ಮಿಲಿಟರಿಗೆ ಕೊಡಲಾಗಿದೆ. 3 ಲಕ್ಷಕ್ಕೆ ಕಮ್ಮಿಯಿಲ್ಲದಷ್ಟು ಜನರು ಮನೆಯಿಲ್ಲದೆ ಬೀದಿಯಲ್ಲಿ ಆಡಿಗೆ ಮಾಡಿಕೊಂಡು ಬೀದಿಯಲ್ಲಿ ಮಲಗುತ್ತಾರೆ.

ಚೈನಾದಲ್ಲಿ ಅಮೇರಿಕಾ ಇಂಜನಿಯರುಗಳು ಒಂದು ಭಾರಿ ಅಣೆಕಟ್ಟನ್ನು ಚಾಂಗ್‌ಕಿಂಗ್ ಬಳಿ ಯಾಂಗ್‌ಟೀಜ್ ನದಿಗೆ ಕಟ್ಟುವರು. ಇದರಿಂದ 92500 ಮಿಲಿಯ ಕೂಬಿಕ್ ಗಜ ನೀರನ್ನು ಶೇಖರಿಸಬಹುದೆಂದೂ, ಅಣೆಕಟ್ಟಿನ ಉದ್ದ 600–700 ಮೈಲಿಗಳಾಗಬಹುದೆಂದೂ, ಅಲ್ಲಿ 11 ಮಿಲಿಯ ಕಿಲೊವಾಟ್ ವಿದ್ಯುಚ್ಛಕ್ತಿ ತಯಾರ್ಮಾಡುವರೆಂದೂ. ಇದನ್ನು ಸೃಷ್ಟಿಸಲು 1000 ಮಿಲಿಯ ಪೌಂಡು ವ್ಯಯಮಾಡುವರೆಂದೂ, ಇಷ್ಟು ಭಾರಿ ಅಣೆಕಟ್ಟು ಪ್ರಪಂಚದಲ್ಲೇ ದೊರುವುದಿಲ್ಲವೆಂದೂ ಹೇಳಲಾಗಿದೆ.

ಬೊಂಬಾಯಿನಲ್ಲಿ ಹೋಟಲುಗಳಿಗೆ ಮತ್ತು ಟೀ ಅಂಗಡಿಗಳಿಗೆ ನಿನ್ನೆಯಿಂದ ಹಾಲು ಮಾರಬಾರದೆಂದು ಸರ್ಕಾರಿ ಆಜ್ಞೆಯಾಗಿದೆ ಹಾಲಿನ ವ್ಯಾಪಾರಿಗಳು ಕೋಪದಿಂದ ಹಾಲನ್ನೆಲ್ಲಾ ಬೀದಿಯಲ್ಲಿ ಚಲ್ಲಿದರು. ಶ್ರೀಕೃಷ್ಣ ಪರಮಾತ್ಮನ ಕಾಲದಲ್ಲಿ ಹಾಲಿನ ಕೋಡಿ ಹರಿಯುವುದನ್ನು ನೋಡದ ಮುಂಬೈ ನಿವಾಸಿಗಳು ರಸ್ತೆ ಚರಂಡಿಗಳಲ್ಲಿ ಹಾಲು ಹರಿಯುವುದನ್ನು ನೋಡಿ ಪೆರಾಸಿದರು. ಮುಂಬೈಗೆ ಪ ತಿ ದಿವಸ 7500 ಟನ್ ಹಾಲು ಬೇಕಾಗುವುದು. ಇದರಲ್ಲಿ 3000 ಟನ್ನಿನಷ್ಟು ಹೋಟಲಿನವರೇ ಕೊಳ್ಳುವರು!

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪಾಯಕಾರಿಯಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಿಗಳಿಗೂ, ಜಪಾದಿಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸುವುದಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, ½ ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಖಾಸಗಿ ಬ್ರಾಂಡ್

ಓರಿ ಬಕ್ರಿಂಡ ಕೇಸರಿಯ ಪುಡಿಯನ್ನು ¼ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16/1 ತೊಲ, 8/1 ತೊಲ, 4/1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮಾರುವರು. ಮತ್ತು —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು

14. ಗೋವಿಂದಪ್ಪ ನಾಯಿಕ'ಬೀದಿ ಟಿ.ಟಿ ಮದರಾಸ್.

ಶಕ್ತಿ ವೃದ್ಧಿಗೆ — ಧಾತು ಪುಷ್ಟಿಗೆ

ಶಕ್ತಿ ಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಶಕ್ತಿ ಸುಧಾ, ೧೧೬೭ ಚಾಮರಾಜಪುರಂ ಮೈಸೂರು.

ಮೈಸೂರು ರಣಜಿತ್ ಟಾಕೀಸಿನಲ್ಲಿ 6 ನೇ ವಾರ

At Ranjit ತಕದಿರ್

(ಹಿಂದಿ)

ಚಂದ್ರಮೋಹನ್ — ಮೋತಿಲಾಲ್ — ನೆಗೀಸ್ — ಬಾಲ್ಕಿ

ಮುಂತಾದವರು ಪಾತ್ರವಹಿಸಿರುವರು

For Good Printing—

L. N. Press

Srirampet MYSORE

Good Coffee

Sastry's Coffee Rooms

Chamarajapuram, Mysore

ಸತ್ಯವಾದಿ

— ವಾರದ ಸಂಚಿಕೆ —

ಪರಸ್ಥಳಕ್ಕೆ ವಾರ್ಷಿಕ ಚಂದಾ

ಅಂಚೆಪೆಟ್ಟಿ ಸೇರಿ ರೂ. 1-12-0

TALK-A-TONE

(The Pioneer Film-mag of S. India)

Local Agent—D. Mahadev

Opera Talkies, Mysore



ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದಕೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

ಅಂದವಾದ ಹೊಲಿಗೆಗೆ

ರೆಡಿಮೇಡ್ ಬಟ್ಟೆಗೆ

— ನಮ್ಮಲ್ಲಿ ಬನ್ನಿ —

ಶ್ರೀ ಮಹಾಲಕ್ಷ್ಮಿ ಹೌಸ್

ಸಯ್ಯಾಜಿರಾವ್ ರಸ್ತೆ, ಮೈಸೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore